ದಿಃ **14-06-2023** ರಂದು ಮಧ್ಯಾಹ್ನ 3.00 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 2 ರ ಪರ ವಕೀಲರಿಂದ

ನಿಪಿ-8 ರ ದಾಖಲೆಯಂತೆ ನಮ್ಮ ಚಿಕ್ಕಪ್ಪನಾದ ಬಾಳಪ್ಪ ಮತ್ತು ಅವರ ಮಕ್ಕಳಾದ ಪ್ರತಿವಾದಿ -5 ಮತ್ತು 6 ರವರು ಪ್ರತಿವಾದಿ ನಂ.8 ಮತ್ತು 9 ರವರ ತಂದೆಗೆ ದಾವಾ ಅನುಸೂಚಿ-4 ರ ಸ್ವತ್ತಿನಲ್ಲಿರುವ ತಮ್ಮ ಪಾಲಿನ 1/3 ಹಿಸ್ಸೆಯನ್ನು ಖರೀದಿ ಕೊಟ್ಟಿರುತ್ತಾರೆ ಎಂದರೆ ಸರಿ. ದಾವಾ ಅನುಸೂಚಿ-4 ರ ಸ್ವತ್ತಿನಲ್ಲಿ ಪಟ್ಟಿಗಳು ದಕ್ಷಿಣೋತ್ತರವಾಗಿರುತ್ತವೆ. ಪ್ರತಿವಾದಿ ನಂ.5, 6 ಮತ್ತು ಅವರ ತಂದೆ ಪ್ರತಿವಾದಿ ನಂ.8 ಮತ್ತು 9 ರವರ ತಂದೆಗೆ ದಾವಾ ಅನುಸೂಚಿ-4 ರ ಸ್ವತ್ತಿನ ಯಾವ ಪಟ್ಟಿಯನ್ನು ಮಾರಾಟ ಮಾಡಿರುತ್ತಾರೆ ಎಂಬುವುದು ನನಗೆ ಗೊತ್ತಿಲ್ಲ. ದಾವಾ ಅನುಸೂಚಿ-4 ರ ಸ್ವತ್ತಿನಲ್ಲಿ ಪ್ರತಿವಾದಿ ನಂ.5, 6 ಮತ್ತು ಅವರ ತಂದೆ ಬಾಳಪ್ಪರವರು ದಕ್ಷಿಣ ದಿಕ್ಕಿನ ಪಟ್ಟಿಲ್ಲಿ 1/3 ಹಿಸ್ಸೆಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ತಂದೆಗೆ ಮತ್ತು ಪ್ರತಿವಾದಿ -7 ರವರ ತಂದೆಗೆ ಸದರಿ ದಾವಾ ಅನುಸೂಚಿ-4 ರ ಸ್ವತ್ತಿನ ಉತ್ತರ ದಿಕ್ಕಿನಲ್ಲಿ ಪಟ್ಟಿ ಬಂದಿತ್ತು ಎಂದರೆ ಸರಿ. ಸದರಿ ಉತ್ತರ ದಿಕ್ಕಿನ ಪಟ್ಟಿಯಲ್ಲಿ ದಕ್ಷಿಣೋತ್ತರವಾಗಿ ಪಟ್ಟಿ ಮಾಡಿಕೊಂಡು ನಮ್ಮ ತಂದೆ ಮತ್ತು ನಮ್ಮ ಚಿಕ್ಕಪ್ಪ ಪಾಲು ಪ್ರತಿವಾದಿ -7 ರವರ ತಂದೆ ಪಟ್ಟಿಮಾಡಿಕೊಂಡಿದ್ದರು ಎಂದರೆ ಸರಿ. ಪಶ್ಚಿಮ ದಿಕ್ಕಿನ ಪಟ್ಟಿ ನಮ್ಮ ಕಬ್ಜೆಗೆ ಬಂದಿದ್ದು ಮತ್ತು ಪೂರ್ವ ದಿಕ್ಕಿನ ಪಟ್ಟಿ ಪ್ರತಿವಾದಿ -7 ರವರ ತಂದೆಯ ಪಾಲಿಗೆ ಬಂದಿತ್ತು ಎಂದರೆ ಸರಿ. ನಮ್ಮ ತಂದೆ ಮತ್ತು ನಮ್ಮ ಚಿಕ್ಕಪ್ಪಂದಿರರು ಜೀವಂತ ಇರುವಾಗ ವಿಭಾಗ ಮಾಡಿಕೊಂಡು ತಮ್ಮ ತಮ್ಮ ಪಾಲಿಗೆ ಬಂದ ಜಮೀನುಗಳ ಕಬ್ಜಾ ವಹಿವಾಟಿನಲ್ಲಿ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ನನ್ನ ತಂದೆ ಮತ್ತು ಚಿಕ್ಕಪ್ಪಂದಿರ ಮಧ್ಯೆ ಪಾಲು ಆಗಿರುವುದಿಲ್ಲ ಎಂದು ನುಡಿಯುತ್ತಾರೆ . ಪ್ರತಿವಾದಿ -5, 6 ಮತ್ತು ಅವರ ತಂದೆ ಮಾರಾಟ ಮಾಡಿದ ಜಮೀನಿನ ಕಬ್ಜೆಯಲ್ಲಿ ಖರೀದಿದಾರರ ವಾರಸುದಾರರು ಈಗ ಇರುತ್ತಾರೆ ಎಂದರೆ ಸರಿ. 1987 ರಲ್ಲಿಯೇ ಪ್ರತಿವಾದಿ -7 ರವರ ತಂದೆ ಮಲ್ಲಪ್ಪರವರು ಮೃತರಾಗಿದ್ದರು ಎಂದರೆ ನನಗೆ ನೆನಪಿಲ್ಲ. ನನ್ನ ತಂದೆ 1992 ರಲ್ಲಿ ಮೃತರಾಗಿರುತ್ತಾರೆ. ನನ್ನ ತಂದೆ ಮೃತರಾದ ನಂತರ ನಾವು ವಾರಸಾ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಾನು ಮತ್ತು ನನ್ನ ಸಹೋದರರು ನಮ್ಮ ತಂದೆಯ ಪಾಲಿನ ಜಮೀನಿನಲ್ಲಿ ಪಾಲು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸಂಗತಿಯನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ-4 ರ ಸ್ವತ್ತಿನಲ್ಲಿ ನಮಗೆ ಪಾಲು ಬಂದಿದ್ದು ಹಾಗೂ ಪ್ರತಿವಾದಿ -2 ರವರಿಗೆ ಇನ್ನೂಳಿದ ದಾವಾ ಅನುಸೂಚಿ-1 ರಿಂದ 3 ಮತ್ತು 5 ರ ಸ್ವತ್ತಿನಲ್ಲಿ ಪಾಲು ಬಂದಿತ್ತು ಎಂದರೆ ಸರಿಯಲ್ಲ. ನಮ್ಮ ತಂದೆಯ ಪಾಲಿಗೆ ಬರುವ ದಾವಾ ಅನುಸೂಚಿ ಸ್ವತ್ತುಗಳ 1/3 ಅಂಶ ಹಿಸ್ಸೆಯಲ್ಲಿ ನಾವು ಉಪಭೋಗ ಮಾಡುತ್ತಾ ಬಂದಿರುತ್ತೇವೆ ಎಂದರೆ ಸರಿ. ನಮ್ಮ ಕುಟಂಬದಲ್ಲಿ

ಪಾಲು ವಿಭಾಗವಾಗಿದ್ದರು ಸಹ ಪಾಲು ವಿಭಾಗವಾಗಿರುವುದಿಲ್ಲ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ. ಹೆ. ಕೇ. ಸರಿ ಇದೆ,**

(ರಾಜೀವ ಗೋಳಸಾರ)

**ಪ್ರ.ದಿ.&ನ್ಯಾ.ದಂ.,ಗೋಕಾಕ.**

ದಿಃ **14-06-2023** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 2 ರ ಪರ ವಕೀಲರಿಂದ

ನನ್ನ ತಂದೆಗೆ 3 ಜನ ಅಣ್ಣತಮ್ಮಂದಿರು ಎಂದರೆ ಸರಿ. ಮಲ್ಲಪ್ಪ ರವರು ನನ್ನ ತಂದೆಯ ಕೊನೆಯ ತಮ್ಮ ಎಂದರೆ ಸರಿ ಅವರು ತೀರಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಮಲ್ಲಪ್ಪ ರವರಿಗೆ ಪ್ರತಿವಾದಿ - 7 ಮಾತ್ರ ಮಗನಿರುತ್ತಾನೆ. ಡೈರಿ ಸಂಖ್ಯೆ 718 ನ್ನು ನಿಪಿ-9 ರಂತೆ ಗುರುತಿಸಿಕೊಂಡಿರುತ್ತೇನೆ ಎಂದರೆ ಸರಿ. ಸದರಿ ನಿಪಿ-9 ರಲ್ಲಿ ಡೈರಿ ಸಂಖ್ಯೆ 715 ಇರುತ್ತದೆ ಎಂದರೆ ಸರಿ. ಸದರಿ ಡೈರಿ ಸಂಖ್ಯೆ ನಮ್ಮ ದಾವಾ ಆಸ್ತಿಗಳ ಕುರಿತು ಮೃತ ಮಲ್ಲಪ್ಪ ರವರಿಗೆ ಎಷ್ಟು ಜನ ಮಕ್ಕಳಿರುತ್ತಾರೆ ಎಂದು ಉಲ್ಲೇಖ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ಮೃತ ಮಲ್ಲಪ್ಪ ರವರಿಗೆ ಡೈರಿ ಸಂಖ್ಯೆ 715 ರಲ್ಲಿ ನಮೂದು ಮಾಡಿರುವಂತೆ 4 ಜನ ಹೆಣ್ಣು ಮಕ್ಕಳು ಹಾಗೂ ಪ್ರತಿವಾದಿ -7 ರವರು ವಾರಸುದಾರರು ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ಮೃತ ಚಿಕ್ಕಪ್ಪ ಮಲ್ಲಪ್ಪ ರವರ 1 ನೇ ಮಗಳ ಹೆಸರು ಗೌರವ್ವ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ . ಸದರಿ ಗೌರವ್ವ ರವರನ್ನು ಉರುಬಿನಟ್ಟಿ ಗ್ರಾಮದ ನಾಗಪ್ಪ ಇಂಗಳಗಿ ಎಂಬುವರಿಗೆ ಮದುವೆ ಮಾಡಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ -7 ರವರು ನನ್ನ ಚಿಕ್ಕಪ್ಪ ಮೃತ ಮಲ್ಲಪ್ಪ ರವರ 2 ನೇ ಮಗ ಎಂದರೆ ಸರಿ. ನನ್ನ ಚಿಕ್ಕಪ್ಪ ಮೃತ ಮಲ್ಲಪ್ಪ ರವರಿಗೆ ಅಂಬವ್ವಾ ಬಸವ್ವಾ ಮತ್ತು ಮಲ್ಲವ್ವಾ ಎನ್ನುವ ಮಕ್ಕಳಿರುತ್ತಾರೆ ಎಂದರೆ ನನಗೆ ಗೂತ್ತಿಲ್ಲ. ಸದರಿ ನನ್ನ ಚಿಕ್ಕಪ್ಪನ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ನಾವು ಉದ್ದೇಶಪೂರ್ವಕವಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನನ್ನ ಚಿಕ್ಕಪ್ಪ ಮೃತ ಮಲ್ಲಪ್ಪ ರವರ ಎಲ್ಲ ಹೆಣ್ಣು ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡದೆ ಸಲ್ಲಿಸಿದ ಈ ದಾವೆ ಉರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಮಧ್ಯಾಹ್ನ -3 ಗಂಟೆಗೆ ಮುಂದೂಡಲಾಯಿತು.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)

**ಪ್ರ.ದಿ.&ನ್ಯಾ.ದಂ.,ಗೋಕಾಕ.**